ಸಿ1 440	174	39.54	ಬೇರೆ ಕೆಲಸಗಳಾದ ಗೋಡೆ ಕಿಟಕಿ, ಬಾಗಿಲು ಪ್ಲೋರಿಂಗ್ ಪೇಟಿಂಗ್ ನೀರು, ವಿದ್ಯುತ್ ಇತ್ಯಾದಿ ಕೆಲಸಗಳು ಜೊತೆಯಲ್ಲಿ ನಡೆಯುತ್ತಿದೆ ಇತರೆ ಕೆಲಸಗಳಾದ ಹೊರ ನೀರು ಸರಬರಾಜು, ಸ್ಯಾನಿಟರಿ, ವಿದ್ಯುತ್, ಸಬ್‌ಸ್ಟೇಷನ್, ಟ್ರಾನ್ಸ್‌ಫಾರಂಗಳು ಇತ್ಯಾದಿ ಪೂರೈಕೆ ಕಾರ್ಯಗಳು ಪ್ರಗತಿಯಲ್ಲಿದೆ 2ನೇ ಹಂತವನ್ನು 60 ವಾರಗಳಲ್ಲಿ ಮುಗಿಸಲು ಯೋಜಿಸಲಾಗಿದೆ. ಈ ಪೈಕಿ ಒಟ್ಟು 1338 ಮನೆಗಳನ್ನು ಕಟ್ಟಲು ಯೋಜಿಸಲಾಗಿದ್ದು ಈಗಾಗಲೇ ಪ್ರಾರಂಭವಾಗಿದೆ. ಕೆಲಸಗಳು ಪಾಯದ್ಯಃ ನೆಲಮಹಡಿಯ ಹಂತದಲ್ಲಿದೆ.

ಈ) ಹೌದು ಅವಧಿ ಅವಲಂಬಿತವಾಗಿದೆ.

ಉ) ಈ ಕೆಲಸವನ್ನು ವಹಿಸಿರುವ ಗುತ್ತಿಗೆದಾರರು ಪರ್ಟ್ ಚಾರ್ಟ್‌ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲಸದ ವಿವರ ಮತ್ತು ಪೂರ್ಣಗೊಳಿಸಬೇಕಾದ ವಿವರಗಳಿರುತ್ತದೆ. ಸದರಿ ಪರ್ಟ್ ಚಾರ್ಟ್‌ಗಳು ಪ್ರತಿ ತಿಂಗಳು ಮತ್ತು ಪ್ರತಿವಾರ ಪೂರೈಸಬೇಕಾದ ಕೆಲಸಗಳ ಮಾಹಿತಿ ನೀಡುತ್ತವೆ. ಸದರಿ ಪರ್ಟ್ ಚಾರ್ಟ್‌ಗಳಲ್ಲಿ ತೋರಿಸಿದಂತೆ ಮೊದಲನೆಯ ಹಂತದ ಕೆಲಸಗಳು ಡಿಸೆಂಬರ್ 15, 1995 ರೊಳಗೆ ಪೂರ್ಣಗೊಳ್ಳುವುದು.

ಊ) ಮೊದಲನೆ ಹಂತದ ಕೆಲಸಗಳು ಫೆಬ್ರವರಿ 1996ರೊಳಗೆ ಪೂರ್ಣಗೊಳಿಸಬಹುದಾಗಿದೆ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ

ಋೂ) ಉದ್ಭವಿಸುವುದಿಲ್ಲ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ

1477 - ಡಾ॥ ಎ.ಬಿ. ಮಲಕರೆಡ್ಡಿ (ಯಾದಗಿರಿ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಎಂದು ಸ್ಥಾಪಿಸಲಾಯಿತು?

ಆ) ಅದರಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು?

ಇ) ಈ ನಿಗಮದ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಸ್ಥಳಾಂತರಿಸುವ ಪ್ರಸ್ತಾವನೆ ಏನಾದರೂ ಇದೆಯೇ?

ಈ) ಹಾಗಿದ್ದಲ್ಲಿ ಯಾವ ಸ್ಥಳಕ್ಕೆ ಸ್ಥಳಾಂತರಿಸಲು ಪರಿಶೀಲಿಸಲಾಗುತ್ತಿದೆ?

ಉ) ಈ ಸ್ಥಳಾಂತರದಿಂದ ಉಂಟಾಗುವ ವೆಚ್ಚವೇನು?

ಊ) ಈ ಸ್ಥಳಾಂತರದಿಂದ ಆಗುವ ಲಾಭವೇನು?

ಋ) ಈ ಸ್ಥಳಾಂತರವನ್ನು ಕುರಿತು ಯಾವುದಾದರೂ ಅಧ್ಯಾಯವನ್ನು ಕೈಗೊಂಡಿದ್ದೀರೆಯೇ?

VIII F-19

ಖ)ಹಾಗಿದ್ದಲ್ಲಿ ವಿವರಗಳನ್ನು ನೀಡುವುದು.

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

ಅ) 1975ನೇ ಇಸವಿ ಅಕ್ಟೋಬರ್‌ನಲ್ಲಿ ಸ್ಥಾಪಿಸಲಾಗಿದೆ.

ಆ) 1381

ಇ) ಮತ್ತು ಈ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಸುಮಾರು ರೂ. 25.00 ಲಕ್ಷಗಳು

ಊ) ಸ್ಥಳಾಂತರದಿಂದ ನೇಕಾರರಿಗೆ ಸೇವೆಯನ್ನು ಉತ್ತಮಪಡಿಸಲು ಮತ್ತು ಅವರ ದೈನಂದಿನ ಸಮಸ್ಯೆಗಳನ್ನು ಬಗೆಹರಿಸಲು ಅನುಕೂಲವಾಗುವುದೆಂದು ಅಭಿಪ್ರಾಯ ಪಡಲಾಗಿದೆ.

ಋ) ಮತ್ತು ಖ) ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹಿಂದುಳಿದ ಹಾಸ್ಟೆಲ್‌ಗಳಿಗೆ, ವಿದ್ಯಾರ್ಥಿಗಳಿಗೆ ಆಹಾರ ಪದಾರ್ಥಗಳನ್ನು ನೀಡುವ ಬಗ್ಗೆ

1915 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) *ಹಿಂದುಳಿದ ಹಾಸ್ಟೆಲ್ಲುಗಳ ವಿದ್ಯಾರ್ಥಿಗಳಿಗೆ ಹಣ ನೀಡುವ ಬದಲು ಆಹಾರ ಪದಾರ್ಥಗಳನ್ನು ನೀಡುವ ಯೋಜನೆ ಸರ್ಕಾರದ ಮುಂದೆ ಇದೆಯೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಹಿಂದುಳಿದ ಹಾಸ್ಟೆಲುಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ಹಾಗೂ ಊಟದ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಹಣವನ್ನು ವಿದ್ಯಾರ್ಥಿಗಳಿಗೆ ನೀಡುತ್ತಿಲ್ಲ.

ಬೃಹತ್ ಉದ್ದಿಮೆಗಳನ್ನು ಸ್ಥಾಪಿಸುವುದು

1483 - ಶ್ರೀ ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೃಹತ್ ಉದ್ದಿಮೆಗಳನ್ನು ಸ್ಥಾಪಿಸುವಾಗ ಜನರನ್ನು ಜನಪ್ರತಿನಿಧಿಗಳನ್ನು ಸಂಘ ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಮತ್ತು ಅವಶ್ಯಕತೆಗಿಂತ ಹೆಚ್ಚು ಫಲವತ್ತಾದ ಭೂಮಿಗಳನ್ನು ಸರ್ಕಾರವು ಪರವಾನಿಗೆ ಕೊಟ್ಟು ಪ್ರೋತ್ಸಾಹಿಸುತ್ತದೆ ಎನ್ನುವುದು ನಿಜವೇ?*

ಆ) *ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಮತ್ತು ಆ) ಕೈಗಾರಿಕೆಗಳಿಗೆ ಬೇಕಾಗುವ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ವಿತರಿಸುತ್ತದೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಬಹುತೇಕವಾಗಿ ತನ್ನ ಕೈಗಾರಿಕಾ ಪ್ರದೇಶಗಳಿಂದ ವಿತರಿಸುತ್ತದೆ. ಭಾರಿ ಕೈಗಾರಿಕೆಗಳಿಗೆ ಮಂಡಳಿಯ ಮತ್ತು ಸರ್ಕಾರದ ಮಂಜೂರಾತಿ ಪಡೆದ ನಂತರ ಅವಶ್ಯಕವಾದಷ್ಟು ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಸ್ವಾಧೀನಪಡಿಸಿಕೊಂಡು ವಿತರಿಸುತ್ತದೆ. ಈ ಭೂಮಿಯನ್ನು ಮಂಡಳಿಯು ಯೋಜನೆಗಳನ್ನು